ಸಭೆಯನ್ನು ಕರೆಯುತ್ತಿದ್ದೇವೆ, ೧೮ನೇ ತಾರಿಖು ಇದನ್ನು ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು. ಇತ್ತೀಚೆಗೆ ಏನು ತೀರ್ಮಾನ ಆಗಿದೆಯೋ ಆದು ನನಗೆ ಗೊತ್ತಿಲ್ಲ. ನಾನು ಇವೊತ್ತು ಪುನಃ ಆವರನ್ನು ಸಂಪರ್ಕಮಾಡಿ ಏನಾದರೂ ಮಾಡಿ ಈ ವಿಷಯ ಇತ್ಯರ್ಥವಾಗುವಂತೆ ನೋಡುತ್ತೇನೆ, ಇದು ಸರ್ಕಾರ ಮಾಡುವ ಕೆಲಸ ಅಲ್ಲ, ವಿಶ್ವವಿದ್ಯಾಲಯದವರು ಮಾಡುವ ಕೆಲಸ. ಅದಕ್ಕೋಸ್ಕರ ನಾನು ಮಾನ್ಯ ಸದಸ್ಯರಲ್ಲಿ ಅರಿಕೆಮಾಡಿಕೊಳ್ಳುವುದೇನೆಂದರೆ, ಇದನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಆವರ ಬೇಡಿಕೆಗಳು ಏನಿವೆ, ಆವುಗಳಲ್ಲಿ ಕೆಲವನ್ನು ಈಡೇರಿಸಿದ್ದೇವೆ. ಈಗ ಆವರು ಕೇಳುತ್ತಿರುವುದು, ಈಗ ಇರುವ ಪ್ರಕಾರ ಆವರು ನಾಲ್ಕನೇ ಸೆಮಿಸ್ಟರ್ ಮುಗಿಸಿ ಐದನೇ ಸೆಮಿಸ್ಟರ್‌ಗೆ ಹೋಗಬೇಕಾದರೆ, ಮೊದಲನೇ ಸೆಮಿಸ್ಟರ್ ಸಬ್ಜೆಕ್ಟ್‌ಸನ್ನು ಪೂರ್ತಿಮಾಡಬೇಕೆಂದು ಇದೆ. ಆದರೆ ವಿದ್ಯಾರ್ಥಿಗಳು ಹೆಚ್ಚಿನ ಬೆನಿಫಿಟ್ಸ್ ಕೊಡಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಈ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆವರು ನಿರ್ಣಯವನ್ನು ತೆಗೆದುಕೊಳ್ಳಬೇಕು. ನಾನು ಇವತ್ತೆ ಪುನಃ ವೈಸ್‌ಛಾನ್ಸಲರ್ ಆವರನ್ನು ಸಂಪರ್ಕಿಸಿ ಈ ವಿಷಯವನ್ನು ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಆಧ್ಯಕ್ಷರು.—ಈಗ ಶಾಸನ ರಚನೆ.....

ಮನವಿಗಳು

ಕೃಷ್ಣ ಮತ್ತು ಕಾವೇರಿ ಜಲಾಯಾನಕ್ಕೆ ಹಣ ಒದಗಿಸುವುದು

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಆಧ್ಯಕ್ಷರೇ, ಈ ಬೆಳಿಗ್ಗೆ ತಾನೇ ಒಂದು ಪ್ರಾಮುಖ್ಯವಾದ ವಿಚಾರದ ಬಗ್ಗೆ ಪ್ರಸ್ತಾಪ ಆಯಿತು. ಕೃಷ್ಣಾ ಜಲಾನಯನ ಮತ್ತು ಕಾವೇರಿ ಜಲಾನಯನ ವಿಚಾರದಲ್ಲಿ ಒಂದು ನಿರ್ಣಯವನ್ನು ನಾವು ತಮ್ಮ ಗಮನಕ್ಕೆ ತಂದಿದ್ದೇವೆ. ಆದನ್ನು ಮಾನ್ಯ ಸದಸ್ಯರು ಎಲ್ಲರೂ ಒಪ್ಪುತ್ತಾರೆ.

ಆಧ್ಯಕ್ಷರು.—ಆವರೂ ನೋಟೀಸ್ ಕೊಟ್ಟಿದ್ದಾರೆ, ತಾವೂ ಸಹ ಕೊಟ್ಟಿದ್ದೀರಿ. ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೃಷ್ಣಾ ಜಲಾನಯನಕ್ಕೆ ಹೆಚ್ಚು ಅರ್ಜೆಂಟ್ ಇದೆ. ಕೃಷ್ಣಾ ಜಲಾನಯನಕ್ಕೆ ೧೯೮೬-೮೭ರ ಹಣಕಾಸಿನ ಸಾಲಿನಲ್ಲಿ ಮುನ್ನೂರು ಕೋಟಿ ರೂಪಾಯಿಗಳಿಗೆ ಕಡಿಮೆ ಒದಗಿಸಬಾರದು, ಹೆಚ್ಚು ಒದಗಿಸಬೇಕು ಮತ್ತು ಕಾವೇರಿ ಜಲಾನಯನಕ್ಕೆ ನೂರು ಕೋಟಿಗಿಂತ ಕಡಿಮೆ ಒದಗಿಸಬಾರದು. ಅಂದರೆ ಮುನ್ನೂರು ಕೋಟಿ ಮತ್ತು ಒಂದು ನೂರು ಕೋಟಿ ರೂಪಾಯಿಗಳನ್ನು ಈ ವರ್ಷದ ಹಣಕಾಸಿನ ಸಾಲಿನಲ್ಲಿ ಕೊಡಬೇಕು ಏಕೆಂದರೆ ಆಪ್ರೋಪ್ರಿಯೇಷನ್ ಬಿಲ್ ಬರುತ್ತಿದೆ. ಈ ನಿರ್ಣಯ ಇವೊತ್ತು ನಾಳೆ ಪಾಸ್ ಆದರೆ ಆಪ್ರೋಪ್ರಿಯೇಷನ್ ಬಿಲ್‌ನಲ್ಲಿ ಸೇರಿಸುವುದಕ್ಕೆ ಆಗುತ್ತದೆ. ಆದ್ದರಿಂದ ಇವೊತ್ತು ಅಥವಾ ನಾಳೆ ಈ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಆಧ್ಯಕ್ಷರು.—ಸೋಮವಾರ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಕರೆದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವರ್ಷಕ್ಕೆ ಇಷ್ಟು ಹಣ ಕೊಡಬೇಕಾದರೆ, ಮುನ್ನೂರು ಕೋಟಿ ಕೃಷ್ಣಾಗೆ ಮತ್ತು ನೂರು ಕೋಟಿ ಕಾವೇರಿಗೆ ಕೊಡಬೇಕಾದರೆ ಸರ್ಕಾರ ಒಪ್ಪಿದೆ, ಮತ್ತು ಎಲ್ಲಾ ಸದಸ್ಯರೂ ಸಹ ಒಪ್ಪುತ್ತಾರೆ. ಇದು ಬಹಳ ಜರೂರಾದ ನಿರ್ಣಯ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಸದನದ ಕಾರ್ಯಕಲಾಪಗಳ ಸಮಿತಿಯ ಸಭೆಯನ್ನು ಇವತ್ತೇ ಕರೆಯಬೇಕಾಗಿತ್ತು. ಇವೊತ್ತು ಇಲ್ಲದಿದ್ದರೆ ಕೊನೆಯಪಕ್ಷ ನಾಳೆಯಾದರೂ ಕರೆಯಬೇಕು, ದಯವಿಟ್ಟು ಮಾನ್ಯ ಲಕ್ಷ್ಮೀಸಾಗರ್‌ರವರು ಇದನ್ನು ಒಪ್ಪುತ್ತಾರೆ ಎಂದು ಭಾವಿಸುತ್ತೇನೆ.

ಆಧ್ಯಕ್ಷರು.—ಸಭಾನಾಯಕರನ್ನು ಕೇಳಿ ನಾಳೆ ಅಥವಾ ಸೋಮವಾರವಾಗಲೀ ಸಭೆಯನ್ನು ಕರೆಯುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಹಣಕಾಸಿನ ವಿನಿಯೋಗಕ್ಕೆ ಸಂಬಂಧ ಪಟ್ಟಿದ್ದುದು. ಆದ್ದರಿಂದ ಇವೊತ್ತೇ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆದರೆ ನಾಳೆ ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಇದನ್ನು ನಾನು ನೋಡುತ್ತೇನೆ. ನಾಳೆ ಅಥವಾ ಸೋಮವಾರ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಸೋಮವಾರ ಆಗುವುದಿಲ್ಲ. ಆಮೇಲೆ ಎಷ್ಟು ದಿವಸ ಉಳಿಯುತ್ತದೆ ? ೨೯ನೇ ತಾರೀಖಿಗೆ ಅಧಿವೇಶನ ಮುಗಿಯುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಏಕೆಂದರೆ ಇದು ಹಣಕಾಸಿನ ವಿನಿಯೋಗಕ್ಕೆ ಸಂಬಂಧಪಟ್ಟಿದ್ದುದು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರನ್ನು ಕರೆಯಿಸಿ ಕೇಳುವುದಕ್ಕೆ ಟೈಮ್ ಎಲ್ಲಿದೆ ಅವರೇನು ಬೇರೆ ಸದನದಲ್ಲಿ ಇದ್ದಾರೆಯೇ ಇದು ಬಹಳ ಮಹತ್ವವಾದ ವಿಷಯ ಇದೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ಸೋಮವಾರ ಕರೆಯೋಣವೇ ಅಥವಾ ನಾಳೆ ಕರೆಯೋಣವೇ ಎಂದು ನಾನು ಮೂರು ನಾಲ್ಕು ಗಂಟೆಗೆ ಹೇಳುತ್ತೇನೆ. ನಾನು ಅವರೊಡನೆ ಮಾತನಾಡಬೇಕೋ ಬೇಡವೋ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇವೊತ್ತೇ ಅವರನ್ನು ಕರೆಯಿಸಿ ನಾಳೆ ಇದನ್ನು ತೆಗೆದುಕೊಳ್ಳಿ. ಇನ್ನು ತಮ್ಮ ಇಚ್ಛೆಗೆ ಬಿಟ್ಟೆದ್ದುದು.

ಅಧ್ಯಕ್ಷರು.—ಎಲ್ಲರ ಇಚ್ಛೆಯೇ ನನ್ನ ಇಚ್ಛೆ ಲೀಡರ್ ಆಫ್ ದಿ ಹೌಸ್ ಅವರ ಕೂಡ ನಾನು ಮಾತನಾಡುತ್ತೇನೆ. ಇಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಯವರು ಇದ್ದಾರೆ. ಅವರು ನಾನು ಕೂಡಿ ಈ ಕೆಲಸ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ನಾನು ನಾಲ್ಕು ಐದು ಗಂಟೆಗೆ ತಿಳಿಸುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಪೈ.ಕೆ. ರಾಮಯ್ಯ.—ಅಧ್ಯಕ್ಷರೇ, ನಾನು ಸಹ ಇಂಥಾದ್ದೇ ಒಂದು ನಿರ್ಣಯವನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಹೌದು, ಅದೂ ಬಂದಿದೆ. ಎರಡೂ ಕಡೆಯವರದ್ದು ಬಂದಿದೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರು ಮೊದಲು ಕೊಟ್ಟಿದ್ದುದು ಎನ್ನುವುದನ್ನು ತಾವು ನೋಡಬೇಕು.

ಅಧ್ಯಕ್ಷರು.—ನೀವು ಅವರಿಗೆ ಸಹಕಾರ ಕೊಟ್ಟರೆ, ಅವರು ನಿಮಗೆ ಸಹಕಾರ ಕೊಡುತ್ತಾರೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಿನ್ನೆ ನಾನು ೫೧೧ರ ಪ್ರಕಾರ ಒಂದು ಮೋಷನ್ ಕಳುಹಿಸಿದ್ದೆ.

ಅಧ್ಯಕ್ಷರು.—ನಿಮ್ಮದನ್ನು ಕೂಡ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಇಡುತ್ತೇನೆ. ಇದರ ಬಗ್ಗೆ ನಾಲ್ಕು ಗಂಟೆಗೆ ನಾನು ನಿಮಗೆ ತಿಳಿಸುತ್ತೇನೆ.

ವಿಂಡಿಯಾ ಮತ್ತು ಮ್ಯಾಂಡೇಟ್ ಪುಸ್ತಕವನ್ನು ಒದಗಿಸುವ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿನ್ನೆಯ ದಿವಸ ನಾನು ಸೈನ್ ಮಾಡಿ ಕೊಟ್ಟಿದ್ದೇನೆ. ವಿಂಡಿಯಾ ಆಂಡ್ ಮ್ಯಾಂಡೇಟ್ ಬಗ್ಗೆ ೫೧೧ರಲ್ಲಿ ನೋಟೀಸ್ ಕೂಡ ಕೊಟ್ಟಿದ್ದೇನೆ. ಕೊನೆಯಪಕ್ಷ ಆ ಪುಸ್ತಕವನ್ನಾದರೂ ನಮಗೆ ಸಪ್ಲೈ ಮಾಡಿ. ಬಹಳ ಒಳ್ಳೆಯ ಪುಸ್ತಕ. ಅದನ್ನು ಓದಿದರೆ ಎಲ್ಲರಿಗೂ ಇದರ ಬಗ್ಗೆ ಗೊತ್ತಾಗುತ್ತದೆ. ಆ ಪುಸ್ತಕವನ್ನಾದರೂ ಕೊಡಿ ಈ ವಿಷಯವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಸದನದ ಕಲಾಪಗಳ ಸಮಿತಿ ಸಭೆಯಲ್ಲಿ ತೀರ್ಮಾನ ಮಾಡಿ. ಆದರೆ ಆ ಪುಸ್ತಕದ ಪ್ರತಿಗಳನ್ನು ಎಲ್ಲರಿಗೂ ಒದಗಿಸಿಕೊಟ್ಟರೆ ಒಳ್ಳೆಯದು. ಪ್ರಿಂಟ್ ಮಾಡಿ ಸುಮಾರು ಆರು ತಿಂಗಳಾಯಿತು. ಕೊಡುವುದಕ್ಕೆ ಏನಾಗಿದೆ ?

ಶ್ರೀ ಎಂ. ಲಕ್ಷ್ಮೀಸಾಗರ್.—ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ, ಈ ವಿಷಯ ಬರಬೇಕು.

(ಗೊಂದಲ)